# ಮಹಾಮಾಯಿಯ ಸ್ನೇಹದೀಪ

**ಯಾರದೋ ಕಳ್ಳುಬಳ್ಳಿಯ, ಎಚ್‌ಐವಿ ಸೋಂಕಿನಿಂದ ಬಳಲುವ ಮಕ್ಕಳು, ತಬಸ್ಸುಮ್ ಅವರನ್ನು ಅಮ್ಮ ಎನ್ನುತ್ತಾರೆ. ಈ ಮಕ್ಕಳಿಗೆ ಮಂಗಳೂರಿನ 'ಸ್ನೇಹದೀಪ'ದ ತಾಯಿಮಡಿಲು ಪ್ರೀತಿ–ಆಸರೆ ಮತ್ತು ಕೊನೆಯ ಭರವಸೆ.**

**■ ಸಂಧ್ಯಾ ಹೆಗಡೆ**

''ತುರ್ತು ಕೆಲಸಕ್ಕಾಗಿ ಬೆಂಗಳೂರಿಗೆ ತೆರಳಿದ್ದೆ. ಮುಸ್ಸಂಜೆಯ ಹೊತ್ತಿಗೆ ಕರೆ ಬಂತು, ಆಕೆ 'ಅಮ್ಮ'ನನ್ನು ನೋಡಬೇಕೆಂದು ಹಟ ಹಿಡಿದಿದ್ದಾಳೆಂದು. ಅದೇ ದಿನ ರಾತ್ರಿ ಬಸ್ ಹತ್ತಿದೆ. ಮಂಗಳೂರಿಗೆ ಬಂದವಳೇ ನೇರವಾಗಿ ಆಸ್ಪತ್ರೆಗೆ ಹೋದರೆ, ಆಕೆಯ ನಿಸ್ತೇಜ ಕಂಗಳು ಏನನ್ನೋ ಅರಸುತ್ತಿದ್ದವು. ನನ್ನನ್ನು ಕಂಡವಳೇ ಚೈತನ್ಯ ಪುಟಿದಂತೆ 'ನೀವು ನನಗೆ ಊಟ ಮಾಡಿಸಿ, ನಿಮ್ಮ ಕೈ ತುತ್ತು ಬೇಕು ನನಗೆ' ಎಂದಳು. 'ನಾನು ನಿಮಗೆ ಎಷ್ಟೆಲ್ಲ ಕಷ್ಟಕೊಟ್ಟೆ, ಕ್ಷಮಿಸಿ ಬಿಡಿ' ಎನ್ನುತ್ತಿರುವಾಗಲೇ, ತೆರೆದ ಐಸಿಯು ವಾರ್ಡ್‌ನ ಬಾಗಿಲೊಳಗಿಂದ ಆಕೆ ಮಲಗಿದ್ದ ಸ್ಟ್ರೆಚರ್ ದಾಟಿ ಹೋಯಿತು. ಮರುದಿನ ಹೊರಬಂದಿದ್ದು ಆಕೆಯ ದೇಹ...''

ಅವಳ ಕಥೆ ಹೇಳುತ್ತಲೇ ಆರ್ದ್ರಗೊಂಡ ತಬಸ್ಸುಮ್, ''ಹಳೆಯ ಕಥೆಗಳ ಪುಟ ತೆರೆಯುವುದೇ ಬೇಡ ಅನ್ನಿಸುತ್ತದೆ. ಎಲ್ಲವೂ ಕರುಣಾಜನಕ ಕಥೆಗಳೇ. ನೆನಪಿಸಿಕೊಂಡಾಗಲೆಲ್ಲ ಮನಸ್ಸು ಮುದುಡುತ್ತದೆ'' ಎನ್ನುತ್ತ ಅವಳ ಕಥೆಯನ್ನು ಮುಂದುವರಿಸಿದರು.

''ಶಿವಮೊಗ್ಗ ಮೂಲದ ಆಕೆ ನಮ್ಮ ಆರೈಕೆ ಕೇಂದ್ರಕ್ಕೆ ಬಂದು ನಾಲ್ಕೈದು ವರ್ಷಗಳಾಗಿದ್ದವು. ಕೋವಿಡ್–19ರ ವೇಳೆ ಆಕೆಯ ಕುತ್ತಿಗೆಯ ಮೇಲೆ ಒಂದು ಗುಳ್ಳೆ ಕಾಣಿಸಿಕೊಂಡಿತು. ಮಸಾಜ್ ಮಾಡಿದಾಗಲೊಮ್ಮೆ ನಿರಾಳವಾಗುವ ಹುಡುಗಿ, ಮತ್ತೆ ನೋವು ಎನ್ನುತ್ತಿದ್ದಳು. ಬಯಾಪ್ಸಿ ಮಾಡಿಸಿದಾಗಲೇ ಗೊತ್ತಾಗಿದ್ದು, ಕ್ಯಾನ್ಸರ್ ಮತ್ತು ಟಿ.ಬಿ. ಒಟ್ಟಿಗೆ ಆಕೆಯ ದೇಹ ಪ್ರವೇಶಿಸಿವೆ ಎನ್ನುವುದು. ಎಲ್ಲ ಚಿಕಿತ್ಸೆ ಕೊಡಿಸಿದ್ದಾಯಿತು. ಬದುಕಿಸಿಕೊಳ್ಳಲು ಆಗಲಿಲ್ಲ. ಆಸ್ಪತ್ರೆಯವರು, ದೇಹವನ್ನು ಹಸ್ತಾಂತರಿಸಲು ಕುಟುಂಬದವರು ಬರಬೇಕು ಎಂದರು. ಆಕೆಯ ಅಣ್ಣನಿಗೆ ಫೋನಾಯಿಸಿದರೆ, ಆತ ಬರಲು ಸಿದ್ಧನಿಲ್ಲ. ಅಂತೂ ಪೊಲೀಸರ ಮೂಲಕ ಸಂಪರ್ಕಿಸಿದಾಗ, ಅಣ್ಣ ಬಂದು ಆಸ್ಪತ್ರೆಗೆ ದೃಢೀಕರಣ ಪತ್ರ ಬರೆದುಕೊಟ್ಟ ಮೇಲೆ ದೇಹವನ್ನು ಕೊಂಡೊಯ್ದು, ಅಂತ್ಯಕ್ರಿಯೆ ನಡೆಸಿದೆವು.

ಮಮತೆಯ ಬಾಂಧವ್ಯ ಕ್ಷಣಾರ್ಧದಲ್ಲಿ ಹೇಗೆ ಕಳಚಿಕೊಳ್ಳುತ್ತದೆ ಎಂದು ಸೋಜಿಗವಾಗುತ್ತದೆ ಒಮ್ಮೊಮ್ಮೆ. ಈ ಘಟನೆ ನೋಡಿದಾಗ ಅದು ಇನ್ನಷ್ಟು ಮನದಟ್ಟಾಯಿತು. ಮಕ್ಕಳಿಲ್ಲದ ದಂಪತಿ ಒಂದು ಮಗುವನ್ನು ದತ್ತು ಪಡೆದಿದ್ದರು. ಅವರು ನೆಲೆಸಿದ್ದು ಮುಂಬೈ ಮಹಾನಗರದಲ್ಲಿ. ಬಹುಕಾಲದ ನಿರೀಕ್ಷೆ, ಬೆಳಕಿನ ಕಿರಣವೊಂದು ಮನೆಯೊಳಗೆ ತೂರಿಬಂದ ಸಂಭ್ರಮದಲ್ಲಿದ್ದ ದಂಪತಿ, ಮಗು ಕೇಳಿದ್ದನ್ನೆಲ್ಲ ಕೊಡಿಸುತ್ತಿದ್ದರು. ಆ ಮಗು 9ನೇ ವರ್ಷದಲ್ಲಿರುವಾಗ, ಮಗುವಿಗೆ ಎಚ್‌ಐವಿ ಪಾಸಿಟಿವ್ ಇರುವುದು ಪಾಲಕರಿಗೆ ತಿಳಿಯಿತು. ಗಂಡನಿಗೆ ಆ ಕ್ಷಣದಲ್ಲೇ ಮಗುವನ್ನು ಮನೆಯಿಂದ ಹೊರದಬ್ಬುವ ಕಠೋರ ಯೋಚನೆ, ಅಮ್ಮನಿಗೆ ಕಂದಮ್ಮನ ಸೆಳೆತ. ಕೊನೆಗೆ ಇಬ್ಬರೂ ಒಮ್ಮತದ ನಿರ್ಧಾರಕ್ಕೆ ಬಂದು ನಮ್ಮ ಕೇಂದ್ರದಲ್ಲಿ ಮಗುವನ್ನು ಬಿಟ್ಟು ಹೋದರು.

ಅಪ್ಪ–ಅಮ್ಮನ ಅಗಲಿಕೆಯ ಕೊರಗಿನಲ್ಲಿ ಮಂಕಾಗಿದ್ದ ಮಗು, 'ಅಮ್ಮ ಅಮ್ಮ' ಎಂದು ಕನವರಿಸುತ್ತಿತ್ತು. ತಿನ್ನಲು 'ಲೇಸ್' ಬೇಕು ಎಂದು ವರಾತ ಹಿಡಿಯುತ್ತಿತ್ತು. ಯಾರೊಡನೆಯೂ ಬೆರೆಯದೆ, ತನ್ನ ಪಾಡಿಗೆ ತಾನಿರುತ್ತಿದ್ದ ಮಗು ದೈಹಿಕವಾಗಿ ದುರ್ಬಲಗೊಂಡಾಗ, ಆಸ್ಪತ್ರೆಗೆ ಸೇರಿಸಿ ಆರೈಕೆ ಮಾಡಿದೆವು. ಮಗುವಿನ ಸಂಕಟ ನೋಡಿ, 'ಒಮ್ಮೆಯಾದರೂ ಬಂದು ಮಗುವನ್ನು ನೋಡಿ ಹೋಗಿ' ಎಂದು ಆ ದಂಪತಿಗೆ ಕರೆ ಮಾಡಿದೆವು. ಅಂತೂ ಒಂದು ದಿನ ಅಮ್ಮ ಬಂದರು. ಒಮ್ಮೆ ಮಗುವನ್ನು ನೋಡಿ, 'ಲೇಸ್' ಕೊಡಿಸಿ ಎಂದು ನೂರೈವತ್ತು ರೂಪಾಯಿ ಕೈಗಿಟ್ಟು

